




# ಸೂರ್ಯ ಶಿಕಾರಿಗೆ, ನೀವೂ ಹತ್ತಿ ಸವಾರಿ!

**ಇದೇ ಜುಲೈ ೩೧ರಂದು ಸೂರ್ಯಾಭಿಮುಖವಾಗಿ ನಭಕ್ಕೆ ಏರಲಿರುವ ಪಾರ್ಕರ್ ಸೋಲಾರ್ ಪ್ರೋಬ್ ಬಾಹ್ಯಾಕಾಶ ನೌಕೆಯಲ್ಲಿ ಉಳಿದೆಲ್ಲಾ ಉಪಕರಣಗಳ ಜೊತೆ ಒಂದು ಮೈಕ್ರೋಚಿಪ್‌ಅನ್ನು ಇಡಲಾಗುತ್ತದೆ. ಆದರಲ್ಲಿ ಮಾನವರ ಹೆಸರುಗಳನ್ನು ಸೇರಿಸಲು ಇಡೀ ಜಗತ್ತಿನಿಂದ ಹೆಸರುಗಳನ್ನು ಆಹ್ವಾನಿಸಲಾಗಿದೆ. ಬಯಸಿದರೆ ಆದರಲ್ಲಿ ನಿಮ್ಮ ಹೆಸರನ್ನೂ ಸೇರಿಸಬಹುದು.**

■ **ಎಂ.ಅಬ್ದುಲ್ ರೆಹಮಾನ್ ಪಾಷ**



ನೆತ್ತಿ ಸುಡುವ ಬಿಸಿಲನ್ನೂ ಲೆಕ್ಕಿಸದೆ ಇಡೀ ದಿನ ಸರದಿ ಸಾಲಿನಲ್ಲಿ ನಿಂತು ಜನ ಟಿಕೆಟ್ ಕೊಳ್ಳುವುದಕ್ಕೆ ಮುಗಿಬಿದ್ದಿದ್ದಾರೆ. ಈಗ ಇಡೀ ದೇಶದಲ್ಲಿ ಐಪಿಎಲ್ ಕ್ರಿಕೆಟ್ ಜ್ವರ. ಗಂಟೆಗಟ್ಟಲೆ ನಿಂತರೂ ಟಿಕೆಟ್ ಸಿಗದೇ ನಿರಾಸೆಯಾದರೂ ಆಗಬಹುದು. ಆದರೆ ನಿಮ್ಮ ಮನೆಯ ತಂಪಿನಲ್ಲಿಯೇ ಕುಳಿತು ನೇರವಾಗಿ ಬುಕ್ ಮಾಡುವ, ಎಲ್ಲದಕ್ಕಿಂತ 'ಹಾಟ್' ಆದ ಟಿಕೆಟ್‌ಗಳು ಈಗ ಸಿಗುತ್ತಿವೆ, ಅದೂ ಉಚಿತವಾಗಿ. ಹೌದು, ಅಮೆರಿಕಾದ ಬಾಹ್ಯಾಕಾಶ ಸಂಸ್ಥೆ 'ನಾಸಾ' ನಮ್ಮನ್ನೆಲ್ಲಾ ಒಂದು ಅದ್ಭುತ ಪ್ರವಾಸಕ್ಕಾಗಿ ಆಹ್ವಾನಿಸಿ, ಉಚಿತ ಟಿಕೆಟ್‌ಗಳನ್ನು ನೀಡುತ್ತಿದೆ, ನಾನಾಗಲೇ ಬುಕ್ ಮಾಡಿಸಿದ್ದೇನೆ.

2001ರಿಂದಲೇ ರಷ್ಯಾ ಮತ್ತು ಅಮೆರಿಕದ ಬಾಹ್ಯಾಕಾಶ ಉದ್ದಿಮೆಯಲ್ಲಿ ಯಶಸ್ವಿಯಾಗಿರುವ ಕೆಲವು ಖಾಸಗಿ ಕಂಪನಿಗಳು ಖಾಸಗಿ ಆಸಕ್ತರನ್ನೂ ಬಾಹ್ಯಾಕಾಶದ ಪ್ರವಾಸಕ್ಕೆ ಕರೆದುಕೊಂಡು ಹೋಗುವ ಯೋಜನೆಯನ್ನು ಆರಂಭಿಸಿದ್ದಾರೆ, ಹಲವರು ಇದರ ಪ್ರಯೋಜನವನ್ನೂ ಪಡೆದುಕೊಂಡಿದ್ದಾರೆ. ಆದರೆ ನಾವು ನೀವೂ ಈ ಕನಸು ಕಾಣುವ ಹಾಗಿಲ್ಲ ಬಿಡಿ. ಏಕೆಂದರೆ ಈ ಪ್ರವಾಸಕ್ಕೆ ನಾವು 2ರಿಂದ 4 ಕೋಟಿ ಡಾಲರುಗಳನ್ನು ಕೊಡಬೇಕಾಗುತ್ತದೆ. ಆದರೆ ಇದೀಗ 'ನಾಸಾ' ಸುಡು ಬೇಸಿಗೆಯಲ್ಲಿ ಸೂರ್ಯನ ಶಿಕಾರಿಗೆ ಹೊರಡಲಿರುವ ಒಂದು ಬಾಹ್ಯಾಕಾಶ ನೌಕೆಯಲ್ಲಿ ನಮ್ಮನ್ನೂ ಸವಾರಿ ಮಾಡಿಸುವ ಯೋಜನೆಯೊಂದನ್ನು ಘೋಷಿಸಿದೆ, ಅದೂ ಉಚಿತವಾಗಿ. ಟಿಕೆಟ್ ಸಿಗುತ್ತಿವೆ, ಎಲ್ಲರಿಗೂ ಸಿಗುತ್ತವೆ. ಮೊದಲು ನಾವು ಈ ಸೂರ್ಯ ಶಿಕಾರಿಯ ಯೋಜನೆಯ ಕುರಿತು ತಿಳಿಯೋಣ.

## ನಾವು ಮತ್ತು ಸೂರ್ಯ

ನಮ್ಮ ವಿಶ್ವದಲ್ಲಿ, (ವಿಶ್ವದಲ್ಲಿ ಎನ್ನುವುದಕ್ಕಿಂತ ಗೋಚರ ವಿಶ್ವದಲ್ಲಿ ಎನ್ನಬೇಕು) ಒಂದು ಬಿಲಿಯನ್ ಟ್ರಿಲಿಯನ್ ನಕ್ಷತ್ರಗಳಿವೆ. ಎಂದರೆ 1ರ